ಇಚ್ಛೆಯಿಲ್ಲ. ಅಪ್ಪನ ಪ್ರಭಾವದಿಂದ ಅವಳು ಬ್ಯಾಂಕಿನಲ್ಲಿ ಕೆಲಸ ಗಿಟ್ಟಿಸಿಕೊಂಡಿದ್ದು ಎಂದು ನಕುಲನಿಗೆ ಸಂಶಯ.

"ಹೌದ್ಹೌದು, ಮೆರಿಟ್ಟು ಅನ್ನೋದು ನಿನ್ನೊಬ್ಬನ ಗುತ್ತಿಗೆ ಅಂದ್ಕೊಂಡಿದೀಯಾ? ಬ್ಯಾಂಕ್ ಎಕ್ಸಾಮ್ ಪಾಸು ಮಾಡ್ದೆ ಕರೆದು ಕೆಲಸ ಕೊಡ್ತಾರಾ?" ಮುನಿಸಿಕೊಳ್ಳುತ್ತಿದ್ದಳು ಶ್ರಾವಂತಿ. ತನ್ನ ತಿಂಗಳ ಖರ್ಚಿಗೆ ಸ್ವಸಂಪಾದನೆ ಮಾಡಿಕೊಳ್ಳಬೇಕೆಂಬ ಸ್ವಾಭಿಮಾನದಿಂದ, ಉಮೇದಿನಿಂದ ಕೆಲಸಕ್ಕೆ ಸೇರಿಕೊಂಡವಳು ಶ್ರಾವಂತಿ. 'ಬೇಡ ಕಣೇ, ನಿಂಗೆ ದುಡ್ಡು ಬೇಕಾದ್ರೆ ಕೊಡೋಕೆ ನಾನಿಲ್ವಾ? ಬೆಳಗಿನಿಂದ ಸಂಜೇವರೆಗೆ ಯಾಕೆ ದುಡಿದು ಹಣ್ಣಾಗ್ತೀಯಾ?' ಕಳಕಳಿಯೊಂದಿಗೆ ಕಣ್ಣಲ್ಲಿ ನೀರು ತುಳುಕಿಸಿಕೊಂಡು ಕೇಳಿದ್ದರಂತೆ ಅಪ್ಪ. ಸೊಪ್ಪು ಹಾಕಿರಲಿಲ್ಲ ಹಟಮಾರಿ. ತನ್ನ ದುಡಿಮೆಯ ದುಡ್ಡು ಎಂದರೆ ಇವತ್ತಿಗೂ ಅವಳಿಗೆ ಹೆಮ್ಮೆ. 'ಕೋಡು...' ಅನ್ನುತ್ತಾನೆ ನಕುಲ.

"ಹೌದು ಕಣೋ, ಇಲ್ಲದಿದ್ರೆ ಪ್ರತಿಯೊಂದಕ್ಕೂ ನಿನ್ನ ಮುಂದೆ ಕೈ ಚಾಚಬೇಕಿತ್ತಲ್ಲ?'' ಎನ್ನುತ್ತಾಳೆ ಶ್ರಾವಂತಿ.

"ದುಡಿದಿದ್ದರಲ್ಲಿ ಅರ್ಧ ದುಡ್ಡು ಬ್ಯೂಟಿಪಾರ್ಲರಿನವರಿಗೆ..." ಎನ್ನುವ ಉತ್ಪ್ರೇಕ್ಷೆ ಮಾತಾಡುತ್ತಾನೆ ನಕುಲ. ತನ್ನ ಅಂದಚಂದಗಳಿಗೆ ಸದಾ ಪ್ರಾಮುಖ್ಯತೆ ಕೊಡುವುದು ಅವಳ ಹುಟ್ಟುಗುಣ ಅನ್ನುವ ಹಾಗಾಗಿಬಿಟ್ಟಿದೆ. ಒಂದೇ ಒಂದು ದಿನ ಅವಳು ಪಾತ್ರೆ ತೊಳೆದಿದ್ದನ್ನಾಗಲೀ, ಮಂಡಿಯೂರಿ ನೆಲ ವರೆಸಿದ್ದನ್ನಾಗಲೀ, ನೋಡಿಲ್ಲ ಎಂದು ದೇವರಾಣೆ ಮಾಡಿ ಹೇಳಬಲ್ಲ ನಕುಲ. ಕೆಲಸದಾಕೆ ಚಕ್ಕರ್ ಹೊಡೆದರೆ ನುಸಿಗಳು ಹಾರಾಡುತ್ತಾ ಮುಸುರೆಪಾತ್ರೆಗಳು ಇದ್ದಲ್ಲೇ ಬಿದ್ದಿರುತ್ತವೆ ಅಥವಾ ನಕುಲ ಆ ಕೆಲಸಕ್ಕೆ ಕೈ ಹಾಕಿ ಪೂರೈಸಬೇಕು.

"ತಾಳಿ ಕಟ್ಟಿದೋನು ಮನೆಗೆಲಸ ಮಾಡ್ತಿದ್ರೆ ನಿಂಗೇನೂ ಅನಿಸೋದೇ ಇಲ್ವಾ?" ತೊಳೆದ ಪಾತ್ರೆಗಳನ್ನು ಟವೆಲ್ಲಿನಿಂದ ವರೆಸುತ್ತಾ, ಅಡುಗೆಮನೆಯಲ್ಲಿ ಜೋಡಿಸುತ್ತಾ, ನಕುಲ ಕೇಳಿದರೆ ರಿಮೋಟ್ ಹಿಡಿದು ಚಾನಲ್ ಬದಲಿಸುತ್ತಾ ಕೂತವಳಿಗೆ ಕಿಂಚಿತ್ತೂ ಪಾಪಪ್ರಜ್ಞೆ ಕಾಡುವುದಿಲ್ಲ.

"ನಾನು ನಿನ್ನಂತೆ ಹೊರಗೆ ಕೆಲಸಕ್ಕೆ ಹೋಗೋದು ನಿಂಗೇನೂ ಅನಿಸೋದೇ ಇಲ್ವಾ?" ಗಿಳಿಯಂತೆ ಉಲಿಯುತ್ತಾಳೆ ಶ್ರಾವಂತಿ.

"ಯಾರು ನಿಂಗೆ ಕೆಲಸಕ್ಕೆ ಹೋಗು ಅಂತ ಹೇಳಿದ್ದು? ಬಿಟ್ಬಾಕು. ನಾನಿದೀನಿ, ನೋಡ್ಕಂತೀನಿ..."

"ಆಹಾ, ಪುರುಷಾಹಂಕಾರ" ಗೇಲಿ ಮಾಡುತ್ತಾಳೆ ಶ್ರಾವಂತಿ. ನಯಾಪೈಸೆ ಬೆಲೆಯಾಗಲೀ, ಕೃತಜ್ಞತೆಯಾಗಲೀ ಇಲ್ಲದ ಕೆಲಸ ಅಂದರೆ ಗೃಹಿಣಿಯದು ಎಂದು ಅವಳ ಹೇಳಿಕೆ, ನಂಬಿಕೆ. ಇಷ್ಟಕ್ಕೂ ಕೆಲಸ ಬಿಟ್ಟರೆ ಶ್ರಾವಂತಿ ನಕುಲನ ಹಂಗಲ್ಲಿ ಬದುಕಬೇಕಾದ್ದೇನಿಲ್ಲ. ಅವಳ ಅಪ್ಪನ ಆಸ್ತಿಯಲ್ಲಿ ಕಾನೂನುರೀತ್ಯಾ ಅವಳಿಗೆ ಅರ್ಧದಷ್ಟು ಸಲ್ಲಿಕೆಯಾಗುವುದರಲ್ಲಿ ಅನುಮಾನವೇನಿಲ್ಲ. ಇದಕ್ಕೆ ಅವಳ ಅಣ್ಣ ತಕರಾರು ಎತ್ತುವವನೂ ಅಲ್ಲ. ವಿಲ್ ಮಾಡಿಟ್ಟಿದ್ದಾರೆ ಅವಳ ಅಪ್ಪ. "ತಗೋ, ನೋಡು..." ಎಂದು ಹಿಂದೊಮ್ಮೆ ಛಾಪಾಕಾಗದದ ಮೇಲೆ ದಾಖಲೆಯಾಗಿದ್ದ ವಿಲ್‌ನ ಪ್ರತಿಯನ್ನು ಅವನ ಕಣ್ಣೆದುರು ಹಿಡಿದಿದ್ದಳು ಶ್ರಾವಂತಿ. ಅವಳ ದನಿಯಲ್ಲಿ ಗರ್ವ ಇಣುಕುತ್ತಿದೆಯೆಂದು ನಕುಲನಿಗೆ ಅನಿಸಿದ್ದು ಅವನ ಭ್ರಮೆ ಇರಬಹುದು.

"ನಾನ್ಯಾಕೆ ನೋಡ್ಲಿ? ಅದಕ್ಕೂ, ನಂಗೂ ಸಂಬಂಧ ಇಲ್ಲ" ಕಣ್ಣೆದುರಿಗಿದ್ದ ಕೈಯನ್ನು ಪಕ್ಕಕ್ಕೆ ಸರಿಸಿದ್ದ. ಅವನ ವರ್ತನೆ ಒರಟು ಅನಿಸಿರಬೇಕು ಶ್ರಾವಂತಿಗೆ.

"ನಿಂಗೆ ಸೊಕ್ಕು ಜಾಸ್ತಿ" ಎನ್ನುತ್ತಾ ಕಾಗದವನ್ನು ಎನ್ವಲಪ್ಪಿನೊಳಗೆ ಸೇರಿಸಿ ತೆಗೆದುಕೊಂಡು ಹೋಗಿ ಬೀರುವಿನಲ್ಲಿ ಭದ್ರಪಡಿಸಿಟ್ಟುಕೊಂಡಿದ್ದಳು. ಎರಡು ದಿನ ಇವನ ಜೊತೆ